ಸಾಕ್ಷಿಯನ್ನು 19.03.2022 ರಂದು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
**ಪಿ.ಡಬ್ಲ್ಯೂ-1**

**ಮುಂದುವರೆದ ಪಾಟೀಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-**

1. ಇದೇ ನ್ಯಾಯಾಲಯದಲ್ಲಿ ಓ.ಎಸ್.65/2014 ಭಾಗಾಂಶ ಕೋರಿ ಸಲ್ಲಿಸಿರುತ್ತೇನೆ. ಅದು ಇನ್ನೂ ಇತ್ಯರ್ಥವಾಗಿರುವುದಿಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ 2 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿರುವ ಮೂಲ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಹಾಗೂ ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ದಾವಾಸ್ತಿ 1 ರಿಂದ 5 ಗಳಿಗೆ ಪ್ರತ್ಯೇಕವಾಗಿ ಚೆಕ್ ಬಂದಿಗಳನ್ನು ಕೊಟ್ಟಿದೆ. ನಾನು ಪ್ರತ್ಯಕ್ಷವಾಗಿ ಸದರಿ ಜಮೀನಿನ ಹತ್ತಿರ ನೋಡಿ ಚೆಕ್ ಬಂದಿಗಳು ಕೊಟ್ಟಿರುವುದಿಲ್ಲ. ಕರಡು ಚೆಕ್ ಬಂದಿಗಳನ್ನು ಕೊಟ್ಟಿರುತ್ತೇನೆ. ಪ್ರತಿವಾದಿಗಳು ಚೆಕ್ ಬಂದಿಗಳು ತಪ್ಪಿರುವ ಬಗ್ಗೆ ತಿಳಿಸಿದ ನಂತರ ನಾನು ಸದರಿ ಚೆಕ್ ಬಂದಿಗಳನ್ನು ನಮ್ಮ ವಕೀಲರಿಗೆ ಹೇಳಿ ತಿದ್ದುಪಡಿ ಮಾಡಿಸಿರುತ್ತೇನೆ. ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ನಂತರ ತಿದ್ದುಪಡಿ ಮಾಡಿಸಿರುತ್ತೇನೆ.
2. 2007-08 ರಲ್ಲಿ ಪ್ರತಿವಾದಿಗಳು ತಕರಾರು ಹಾಕಿದ ನಂತರ ಸದರಿ ತಪ್ಪು ನನಗೆ ಗೊತ್ತಾಗಿರುತ್ತದೆ. ನಾನು ಸ್ಥಳಕ್ಕೆ ಹೋಗಿದ್ದ ಸಮಯದಲ್ಲಿ ದಾವಾಸ್ತಿಗಳಲ್ಲಿ ಖಾಲಿ ಇತ್ತು. ದಾವಾಸ್ತಿ 1 ರಿಂದ 5 ಕ್ಕೆ ಒಂದೇ ಚೆಕ್ ಬಂದಿ ಕೊಟ್ಟಿರುತ್ತೇನೆ. ಎಲ್ಲಾ ದಾವಾಸ್ತಿಗಳು ಒಂದೇ ಚೆಕ್ ಬಂದಿಗೆ ಬರುತ್ತದೆ ಎಂದು ಸಂಬಂದಪಟ್ಟ ಅಧಿಕಾರಿ ಗಳಿಂದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ನಾನು ಇದಕ್ಕೆ ಸಂಬಂದಪಟ್ಟಂತೆ ನಕ್ಷೆಯನ್ನು ಕೊಟ್ಟಿರುತ್ತೇನೆ.
3. ರಾಚಟ್ಟಾಚಾರಿ ನನ್ನ ತಾತ. ಸಿದ್ದ ರಾಚಟ್ಟಾಚಾರಿ ಯಾರು ಎಂದು ನನಗೆ ಗೊತ್ತಿಲ್ಲ. ರಾಚಟ್ಟಾಚಾರಿ ಅವರ ವಂಶಸ್ಥರನ್ನು ತೋರಿಸಲು ನಾನು ಯಾವುದೇ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ನಾನು ಉದ್ದೇಶಪೂರ್ವಕವಾಗಿ ಸದರಿ ವಂಶವೃಕ್ಷವನ್ನು ಹಾಜರುಪಡಿಸಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂಃ-1 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾಖಲೆಗಳನ್ನು ಫೋರ್ಜರಿ ಮಾಡಿರುತ್ತಾರೆ ಎನ್ನುತ್ತಾರೆ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳು ಪಹಣಿಗಳಾಗಿದ್ದು

ಅದನ್ನು ನೋಡಿ ಸಾಕ್ಷಿಯು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಗಳನ್ನು ಈಗ ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು.

**4.** 2 ರಿಂದ 4 ನೇ ಪ್ರತಿವಾದಿಗಳು ನಮ್ಮ ಜನಾಂಗದವರು ಎಂದರೆ ಸರಿ. 2 ನೇ ಪ್ರತಿವಾದಿಯವರ ಗಂಡನ ಹೆಸರು ಸಿದ್ದಾಚಾರಿ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಫಾರಂ ನಂ:-15 ಆಗಿದ್ದು ದೃಢೀಕೃತ ನಕಲಾಗಿದ್ದು ಅದು ಸರ್ವೆ ನಂ:-79/1 ಸಿದ್ದಾಚಾರಿಯವರ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾಖಲೆಯನ್ನು ಸೃಷ್ಠಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಅದನ್ನು ನೋಡಿ ಸಾಕ್ಷಿಯು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯನ್ನು ಈಗ ನಿಡಿ-3 ಎಂದು ಗುರುತಿಸಲಾಯಿತು.

**5.** ದಿ:-20.05.1955 ರಲ್ಲಿ ರಾಚಟ್ಟಾಚಾರಿಯವರು 2 ನೇ ಪ್ರತಿವಾದಿಯವರ ಗಂಡ ಸಿದ್ದಾಚಾರಿಯವರಿಗೆ ಐಟಂ ನಂ:-1 ಆಸ್ತಿಯನ್ನು ಕ್ರಯದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ವಿಚಾರವನ್ನು ಒಪ್ಪಿಕೊಂಡರೆ ನಿಡಿ-3 ರ ಪ್ರಕಾರ ಕ್ರಯವನ್ನು ಒಪ್ಪಿಕೊಳ್ಳುತ್ತೇನೆ ಎಂದು ನಾನು ಸದರಿ ಕ್ರಯಪತ್ರವನ್ನು ಒಪ್ಪಿಕೊಳ್ಳುತ್ತಾ ಇಲ್ಲ ಎಂದರೆ ಸರಿಯಲ್ಲ. 1955 ಕ್ಕಿಂತ ಮುಂಚೆ ಸದರಿ ಆಸ್ತಿ ಜವರೇಗೌಡ ಬಿನ್ ಕಾಳೀರೇಗೌಡರವರಿಗೆ ಆಧಾರ ಕೂಡ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಧಾರವನ್ನು 1955 ರ ಕ್ರಯಪತ್ರದಲ್ಲಿ ಉಲ್ಲೇಖ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದಾಚಾರಿಯವರು ತಮ್ಮ ಜೀವಿತ ಕಾಲದಲ್ಲಿ ತಮ್ಮ ಕುಟುಂಬ ದವರ ಜೊತೆ ಸದರಿ ಐಟಂ ನಂ:-1 ರಲ್ಲಿ ಸ್ವಾಧೀನದಲ್ಲಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಸಿದ್ದಾಚಾರಿ ಯಾರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಿದ್ದಾಚಾರಿಯವರ ಮರಣಾ ನಂತರ ಅವರ ಹೆಂಡತಿಯಾದ 2 ನೇ ಪ್ರತಿವಾದಿಯವರು ಹಾಗೂ ಅವರ ಕುಟುಂಬಸ್ಥರು ಸದರಿ ಆಸ್ತಿಯಲ್ಲಿ ಸ್ವಾಧೀನಾನುಭೋಗದಲ್ಲಿದ್ದು ಖಾತೆ ಬದಲಾವಣೆಯನ್ನು ಮಾಡಿಸಿ ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆದಕಾರಣದಿಂದ ಅವರ ಹೆಸರಿನಲ್ಲಿ ಕೈಬರಹ ಆರ್.ಟಿ.ಸಿ.ಗಳು ಹಾಗೂ ಗಣಕೀಕೃತ ಆರ್.ಟಿ.ಸಿ. ಗಳು ಬರುತ್ತಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ದಾಖಲೆಗಳನ್ನು ಅವರು ಫೋರ್ಜರಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಅದೇ ರೀತಿ 2 ನೇ ಪ್ರತಿವಾದಿಯವರು ಸದರಿ ಆಸ್ತಿಯಲ್ಲಿ ಸ್ವಾಧೀನಾನು ಭೋಗದಲ್ಲಿದ್ದು ಕಂದಾಯವನ್ನು ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

6. 1955 ನೇ ಇಸವಿಯಲ್ಲಿ ನಾನು ಹುಟ್ಟಿರುವುದಿಲ್ಲ. ಈಗ ನನಗೆ ಎಷ್ಟು ವಯಸ್ಸು ಎಂದು ತೋರಿಸಲು ನನ್ನ ಜನ್ಮ ದಿನಾಂಕದ ದೃಢೀಕೃತ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿಯಾದ ನನ್ನ ಚಿಕ್ಕಮ್ಮಳ ವಯಸ್ಸನ್ನು ನಾನು ಅಂದಾಜಿನಲ್ಲಿ ಬರೆಸಿರುತ್ತೇನೆ. 1 ನೇ ಪ್ರತಿವಾದಿ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣದಿಂದ ನಾನು ಅವರ ವಯಸ್ಸಿನ ದೃಢೀಕೃತ ದಾಖಲೆಗಳನ್ನು ಹಾಜರುಪಡಿಸಿರದ ಕಾರಣದಿಂದ ನನಗೆ ನಿಖರವಾದ ಅವರ ವಯಸ್ಸನ್ನು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ 1955 ರಲ್ಲಿ 1 ನೇ ಪ್ರತಿವಾದಿಯವರು ಹುಟ್ಟಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

7. ನಮ್ಮ ತಂದೆ ತಾಯಿಗೆ ಮೂರು ಹೆಣ್ಣು ಮಕ್ಕಳು ಹಾಗೂ ನಾನು ಕಿರಿಯ ಮಗ ಆಗಿರುತ್ತೇನೆ. ನಾನು ನನ್ನ ಸಹೋದರಿಯರ ವಯಸ್ಸನ್ನು ಅಂದಾಜಿನ ಮೇಲೆ ಬರೆಸಿರುತ್ತೇನೆ. ನಾನು ಹೇಳಿದ ಪ್ರಕಾರ ನನ್ನ ಸಹೋದರಿಯವರು 1955 ರಲ್ಲಿ ಹುಟ್ಟಿದ್ದರು ಅಥವಾ ಇಲ್ಲ ಎಂದು ನನಗೆ ಹೇಳಲು ಬರುವುದಿಲ್ಲ. ಹಾಗಾಗಿ ನನಗೆ ಹಾಗೂ ನನ್ನ ಸಹೋದರಿಯವರಿಗೆ ನಾವು ಹುಟ್ಟುವುದಕ್ಕಿಂತ ಮುಂಚೆ ಆಗಿರುವ ವ್ಯವಹಾರಗಳ ಬಗ್ಗೆ ಏನು ಗೊತ್ತಿಲ್ಲ ಎಂದರೆ ಸರಿ.

8. ದಾವಾ ಐಟಂ ನಂ:-2 ಮತ್ತು 3 ಗುರುಮೂರ್ತಿ ಹಾಗೂ ಗುರುಸ್ವಾಮಿ ಯವರ ಹೆಸರಿನಲ್ಲಿ ಇದ್ದ ಕಾರಣದಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರು ದಾಖಲೆಗಳನ್ನು ಸೃಷ್ಠಿ ಮಾಡಿ ಕೊಂಡಿರುತ್ತಾರೆ ಎನ್ನುತ್ತಾರೆ. ಅವರ ಹೆಸರಿನಲ್ಲಿ ದಾಖಲೆಗಳನ್ನು 2006 ರ ಹಿಂದೆ 5 – 10 ವರ್ಷಗಳ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು 1996 ರಿಂದ 2006 ರವರೆಗಿನ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಇಂಡೆಕ್ಸ್ ಆಫ್ ಲ್ಯಾಂಡ್, ಮ್ಯುಟೇಷನ್, ಆರ್.ಟಿ.ಸಿ. ಗಳನ್ನು ಪರಿಶೀಲನೆ ಮಾಡಿದಾಗ ಅವುಗಳು ನಮ್ಮ ತಾತನ ಹೆಸರಿನಲ್ಲಿದ್ದು, ಆರ್.ಟಿ.ಸಿ.ಗಳನ್ನು ಫೋರ್ಜರಿ ಮಾಡಿಕೊಂಡಿರುತ್ತಾರೆ. ನಾನು ಆರ್.ಟಿ.ಸಿ.ಗಳು ಹಾಗೂ ಕ್ರಯ ಪತ್ರವನ್ನು ಹುಡುಕಿ ಪರಿಶೀಲನೆ ಮಾಡಿರುತ್ತೇನೆ. ಆರ್.ಟಿ.ಸಿ. ಗಳು ಹಾಗೂ ಕ್ರಯಪತ್ರವು 2 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿರುತ್ತವೆ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಗಳನ್ನು ಫೋರ್ಜರಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾಸ್ತಿಗಳ ಐಟಂ ನಂ:-1 ರಿಂದ 5 ಯಾವ್ಯಾವ

ವರ್ಷಗಳಲ್ಲಿ ಸೃಷ್ಟಿ ಮಾಡಿಕೊಂಡಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ಅವುಗಳ ದೃಢೀಕೃತ ಕ್ರಯಪತ್ರಗಳನ್ನು ಪಡೆದುಕೊಂಡು ನೋಡಿರುತ್ತೇನೆ. ಸದರಿ ಕ್ರಯಪತ್ರಗಳ ಅಂಶಗಳ ಬಗ್ಗೆ ನಾನು 2006 ರಲ್ಲಿಯೇ ಓದಿ ತಿಳಿದುಕೊಂಡಿರುತ್ತೇನೆ. ಸದರಿ ಕ್ರಯಪತ್ರಗಳು ನನ್ನ ಹತ್ತಿರ ಇರುವುದಿಲ್ಲ, ಅವು ಹಾಳಾಗಿರುತ್ತವೆ. ನಾನು ಮನೆ ಬದಲಾಯಿಸಿದ ಸಂದರ್ಭದಲ್ಲಿ ಸದರಿ ಕ್ರಯಪತ್ರಗಳು ಹಾಳಾಗಿರುತ್ತವೆ. ಅವುಗಳನ್ನು ಮತ್ತೊಂದು ಸಲ ಪಡೆದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಈ ದಾವಾ ಸಲ್ಲಿಸುವ ಸಮಯದಲ್ಲಿ ದಾವಾಸ್ತಿಗಳು ಕ್ರಯಪತ್ರದ ಮೂಲಕ ಯಾರ್ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಸಮಯದಲ್ಲಿ ದಾವಾಸ್ತಿಗಳು ಯಾರ್ಯಾರ ಹೆಸರಿನಲಿತ್ತು ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

**9.** 2006 ರಲ್ಲಿ ದಾವಾಸ್ತಿಗಳಿಗೆ ಸಂಬಂದಪಟ್ಟಂತೆ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ ಎಂದರೆ ಸರಿ. ಆದರೆ ಅವುಗಳು ಯಾರ್ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕ್ರಯಪತ್ರಗಳ ಸಂಪೂರ್ಣ ವಿವರವನ್ನು ಮುಚ್ಚಿಟ್ಟಿರುತ್ತೇನೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಗಳು 1999 ರಲ್ಲಿ ಅಪ್ರಾಪ್ತರು ಇದ್ದರು ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಆರ್.ಟಿ.ಸಿ. ಯಾಗಿದ್ದು ಸರ್ವೆ ನಂ:-79/1 ಸಿ ಗುರುಮೂರ್ತಿ, ಗುರುಸ್ವಾಮಿ, ಅಪ್ರಾಪ್ತರ ತಾಯಿ ಪ್ರೇಮ ರವರ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಮುಂದು ವರೆದು ಅದನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು. ಸದರಿ ಆರ್.ಟಿ.ಸಿ. 3 ಮತ್ತು 4 ನೇ ಪ್ರತಿವಾದಿಗಳಿಗೆ ಯಾವ ಆಧಾರದ ಮೇಲೆ ಬಂದಿತ್ತು ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. 3 ಮತ್ತು 4 ನೇ ಪ್ರತಿವಾದಿಗಳಿಗೆ ದಾವಾಸ್ತಿಯ ಐಟಂ ನಂ:-2 ಮತ್ತು 5 ದಿನಾಂಕ:-12.08.1999 ರ ದಾನಪತ್ರದ ಮೂಲಕ ಅವರ ಅಜ್ಜಿಯಾದ ಟಿ.ಯಶೋಧಮ್ಮ ಕೋಂ ಎ.ಸಿ.ಮಹಾಲಿಂಗಚಾರಿಯವರಿಂದ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**10.** ಅಂದಿನ ಕಾಲಕ್ಕೂ 3 ಮತ್ತು 4 ನೇ ಪ್ರತಿವಾದಿಗಳು ಅಪ್ರಾಪ್ತರು ಇದ್ದ ಕಾರಣದಿಂದ ಅವರ ತಾಯಿ ಪ್ರೇಮ ರವರನ್ನು ಅವರ ಮೈನರ್ ಗಾರ್ಡಿಯನ್ ಎಂದು

ನೇಮಿಸಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ 3 ಮತ್ತು 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಎಂ.ಆರ್.24/1999 – 2000 ಹಾಗೂ ಆರ್.ಟಿ.ಸಿ.ಗಳು ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆಗಳನ್ನು ಸೃಷ್ಠಿ ಮಾಡಿ ಕೊಂಡಿರುತ್ತಾರೆ ಎನ್ನುತ್ತಾರೆ.

**11.** ಅದೇ ರೀತಿ ಐಟಂ ನಂಃ-3 ಮತ್ತು 4 ಪುಟ್ಟರಾಚಾಚಾರಿ ಬಿನ್ ಗುರುಸಿದ್ದಾಚಾರಿ ಯವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಪುಟ್ಟರಾಚಾಚಾರಿ ಅವರು ನಾಗಮ್ಮ 5 ನೇ ಪ್ರತಿವಾದಿಯವರ ಗಂಡ ಎಂದರೆ ಸರಿ. 5 ನೇ ಪ್ರತಿವಾದಿಯವರ ಗಂಡ ಪುಟ್ಟರಾಚಾ ಚಾರಿ ರವರು ದಿಃ-28.09.1964 ರಲ್ಲಿ ಕ್ರಯಪತ್ರದ ಮೂಲಕ 3 ಮತ್ತು 4 ನೇ ಐಟಂ ನ್ನು ಚಿಕ್ಕರಾಚಾಚಾರಿ ಬಿನ್ ರಾಚಟ್ಟಾಚಾರಿ ನಮ್ಮ ಕುಟುಂಬದವರಿಂದ ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಪುಟ್ಟರಾಚಾಚಾರಿ ಹಾಗೂ ಅವರ ಕುಟುಂಬದವರು ಸದರಿ ಆಸ್ತಿಗಳಲ್ಲಿ ಸ್ವಾಧೀನಾನುಭೋಗದಲ್ಲಿದ್ದರು ಎಂದರೆ ಸರಿಯಲ್ಲ. ಪುಟ್ಟರಾಚಾಚಾರಿ ಅವರ ಮರಣಾ ನಂತರ ಅವರ ಹೆಂಡತಿಯಾದ ನಾಗಮ್ಮ ರವರು ಸದರಿ ಆಸ್ತಿಗಳಲ್ಲಿ ಸಾವಧೀನಾನುಭೋಗದಲ್ಲಿದ್ದಾರೆ ಹಾಗೂ ಅವರ ಹೆಸರಿನಲ್ಲಿ ದಾಖಲೆಗಳು ಇವೆ ಎಂದರೆ ಸರಿಯಲ್ಲ.

**12.** ನಮ್ಮ ತಾಯಿ ಜಯಮ್ಮ ರವರು ಸದರಿ ದಾವೆಯನ್ನು 2008 ರಲ್ಲಿ ಸಲ್ಲಿಸಿದ್ದು ಅವರು ಮರಣ ಹೊಂದಿದ ನಂತರ ನನ್ನ ಅಕ್ಕಂದಿರು 2015 ರಲ್ಲಿ ವಾರಸುದಾರರಾಗಿ ಸದರಿ ದಾವೆಯಲ್ಲಿ ಬಂದಿರುತ್ತಾರೆ ಎಂದರೆ ಸರಿ. ಸದರಿ ದಾವೆ ಸಲ್ಲಿಸುವ ಸಮಯದಲ್ಲಿ ನನ್ನ ವಯಸ್ಸು 40 ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನನ್ನ ಪ್ರಕಾರ ನನ್ನ ವಯಸ್ಸು ಆ ಸಮಯದಲ್ಲಿ 40 ವರ್ಷ ಸರಿ ಇರುತ್ತದೆ. ಅದರಂತೆ ನಾನು ದಿಃ-28.09.1964 ರಲ್ಲಿ ಹುಟ್ಟಿರಲಿಲ್ಲ ಎಂದರೆ ಸರಿ. ಆದ್ದರಿಂದ ನಮ್ಮ ಪೂರ್ವಿಕರು ಪ್ರತಿವಾದಿಗಳ ಪೂರ್ವಿಕರ ಜೊತೆ ಸುಮಾರು 50 ವರ್ಷಗಳ ಹಿಂದೆ ದಾಖಲೆಗಳ ವ್ಯವಹಾರಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಪೂರಾತನ ಕಾಲದಿಂದಲೂ ಇದ್ದು ಅವುಗಳನ್ನು ಮರೆ ಮಾಚಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ದಾವಾ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಕ್ರಯಗಳ ಬಗ್ಗೆ ಹಾಗೂ ಕ್ರಯಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನಾನು ಸದರಿ ಕ್ರಯಪತ್ರಗಳ ರದ್ದಾಯಿತಿಗೆ

ಪರಿಹಾರವನ್ನು ಕೋರಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅನುಕೂಲಕ್ಕೆ ತಕ್ಕಂತೆ ನಾನು ಸುಳ್ಳು ಹೆಸರುಗಳನ್ನು ನಮೂದಿಸಿ ಸುಳ್ಳು ವಂಶವೃಕ್ಷವನ್ನು ಈ ದಾವೆಯಲ್ಲಿ ನಮೂದಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ರಾಚಯ್ಯ ರವರ ಮಕ್ಕಳಾದ ಚಿಕ್ಕಸಿದ್ದಯ್ಯ ರವರ ವಂಶಸ್ಥರು, ಹುಸ್ಕೂರು ಚಿಕ್ಕಣ್ಣ, ನಿಂಗಾಚಾರಿ, ರಾಚಾಚಾರಿ ಹಾಗೂ ಗುರುಪ ಅವರಿಗೆ ಕಕ್ಷಿದಾರರಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರೆಲ್ಲರೂ ಈಗ ಮರಣ ಹೊಂದಿರುತ್ತಾರೆ ಎನ್ನುತ್ತಾರೆ.

**13.** 2 ರಿಂದ 5 ನೇ ಪ್ರತಿವಾದಿಗಳು ದಾವಾಸ್ತಿಗಳಲ್ಲಿ ಸ್ವಾಧೀನಾನುಭೋಗದಲ್ಲಿದ್ದು ಹಾಗೂ ಅವರ ಪೂರ್ವಿಕರು ಕೂಡ ಸ್ವಾಧೀನದಲ್ಲಿದ್ದ ಬಗ್ಗೆ ಗೊತ್ತಿದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಮಕ್ಕಳನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷ್ಯ ನುಡಿಸಲು ನಿಮಗೇನಾದರೂ ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ನನ್ನ ಜೊತೆ ಮಾತನಾಡುವುದಿಲ್ಲ ಎನ್ನುತ್ತಾರೆ. ನಾವು ಹಾಗೂ 1 ನೇ ಪ್ರತಿವಾದಿಯವರ ಜೊತೆ ಶರೀಖಾಗಿ 2 ರಿಂದ 5 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ದಾವಾಸಿಗಳನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**14.** ಈ ಸುಳ್ಳು ದಾವೆಗೆ ಪೂರಕವಾಗಿ ನಿಪಿ-6 ರಿಂದ 10 ರವರೆಗೂ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-12 ರಂತೆ ನನ್ನ ತಂದೆ ಪುಟ್ಟಸೋಮಾಚಾರಿಯವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿಪಿ-13 ವಂಶವೃಕ್ಷವನ್ನು ನಾನು ಸರಿಯಾಗಿ ಹಾಜರುಪಡಿಸಿರುವುದಿಲ್ಲ ಹಾಗೂ ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-13 ರಂತೆ ರಾಚಟ್ಟಾಚಾರಿ ಪೌತಿ ಹಾಗೂ ಅವರ ಮಗ ಪುಟ್ಟಸೋಮಾಚಾರಿ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನನ್ನ ತಂದೆಗೆ ಹೊರತು ಪಡಿಸಿ ನಾನು ಆರು ಜನ ಒಡ ಹುಟ್ಟಿದವರ ಬಗ್ಗೆ ನಮೂದು ಮಾಡಿರುತ್ತೇನೆ, ಈಗ ಅವರು ಮರಣ ಹೊಂದಿರುತ್ತಾರೆ. ನಾನು ನಿಪಿ-13 ರಂತೆ ವಂಶವೃಕ್ಷವನ್ನು ಮಾಡಿಸುವ ಸಮಯದಲ್ಲಿ ಅವರು ಬದುಕಿರುವುದಿಲ್ಲ. ಆ ಸಮಯದಲ್ಲಿ ನನ್ನ ತಂದೆ ಕೂಡ ಬದುಕಿರುವುದಿಲ್ಲ. ನಮ್ಮ ತಂದೆಯ ವಂಶಸ್ಥರು ಗಳನ್ನು ಹೊರತು ಪಡಿಸಿ ಅವರ ಒಡಹುಟ್ಟಿದವರ ವಂಶಸ್ಥರನ್ನು ನಿಪಿ-13 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಸದರಿ

ದಾವೆಯನ್ನು ನನ್ನ ತಾತ ರಾಚಟ್ಟಾಚಾರಿಯವರ ಆಸ್ತಿಗಳಲ್ಲಿ ಭಾಗ ಬರಬೇಕೆಂದು ಸಲ್ಲಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ನನ್ನ ತಾತ ರಾಚಟ್ಟಾಚಾರಿಯವರ ಉಳಿದ ಮಕ್ಕಳಿಗೆ ಕೂಡ ಸದರಿ ದಾವಾಸ್ತಿಗಳಲ್ಲಿ ಹಕ್ಕು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಈಗ ಮರಣ ಹೊಂದಿರುತ್ತಾರೆ ಎನ್ನುತ್ತಾರೆ. ಅವರು ಅವರ ವಾರಸುದಾರರನ್ನು ದಾವೆಯಲ್ಲಿ ನಮೂದು ಮಾಡಬೇಕು ಎನ್ನುವ ಕಾರಣದಿಂದ ಅವರೆಲ್ಲರೂ ತೀರಿ ಹೋಗಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**15.** ನನ್ನ ತಂದೆಗೆ ಹೊರತುಪಡಿಸಿ ಆರುಜನರ ಮಕ್ಕಳು ಅವರ ವಿವರಗಳು ಹಾಗೂ ಅವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ಈ ದಾವೆಯಲ್ಲಿ ನಮೂದು ಮಾಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಅವರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-13 ನ್ನು ಈ ದಾವೆಗೋಸ್ಕರ ನನ್ನ ಅನಕೂಲಕ್ಕೆ ತಕ್ಕಂತೆ ಸೃಷ್ಠಿ ಮಾಡಿ ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-14 ಮತದಾನದ ಪಟ್ಟಿಯನ್ನು ಈ ದಾವೆಗೋಸ್ಕರ ನಾನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-11 ನಾನು ನನ್ನ ಅಕ್ಕ ಸುಶೀಲಮ್ಮ ರವರ ಮದುವೆ ಆಮಂತ್ರಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ನಿಪಿ-15 ರಂತೆ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲಿಸಿರುತ್ತೇನೆ, ನನ್ನ ತಾಯಿ ಬದುಕಿರುವಾಗ ಅವರು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸದರಿ ಅರ್ಜಿ ಇತ್ಯರ್ಥ ಆಗಿರುತ್ತದೆ. ಸದರಿ ಅರ್ಜಿಯನ್ನು ನಾನು ಈ ದಾವೆ ಸಲ್ಲಿಸಿದ ನಂತರ 2009 ರಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಪಿ-27 ರ ಪ್ರಕಾರ ನನ್ನ ಅರ್ಜಿ ನಿಪಿ-15 ವಜಾ ಆಗಿರುತ್ತದೆ ಎಂದರೆ ಸರಿ. ನಿಪಿ-16 ರಿಂದ 18 ರವರೆಗೂ ನಾನು ಈ ದಾವೆಗೋಸ್ಕರ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-19 ರ ಪ್ರಕಾರ ನನ್ನ ಜನ್ಮ ದಿನಾಂಕಃ-04.06.1967 ಇದೆ.

**16.** ದಾವಾ ಸ್ವತ್ತುಗಳಿಗೆ ಸಂಬಂದಪಟ್ಟಂತ ಕ್ರಯಪತ್ರಗಳಲ್ಲಿ ಇರುವ ದಿನಾಂಕಗಳಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಈ ದಾವೆಗೋಸ್ಕರ ನಾನು ನಿಪಿ-20 ರಿಂದ 26 ರವರೆಗೂ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾದ್ಯವಾದರೆ 2 ರಿಂದ 5 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ಅವರ ಆಸ್ತಿಗಳನ್ನು ಜಪ್ತಿ ಮಾಡುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನನಗಾಗಲಿ ಅಥವಾ ನನ್ನ ಅಕ್ಕಂದಿರಿಗಾಗಲಿ ಈ ದಾವೆ ಸಲ್ಲಿಸುವ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ತಂದೆ ಜೊತೆ ಯಾವ ವರ್ಷದಲ್ಲಿ ಮದುವೆಯಾಗಿದ್ದರು ಎಂಬ ದಾಖಲೆಗಳು ಇಲ್ಲ. ಅವರು 1965 ಕ್ಕಿಂತ ಮುಂಚೆ ಅಥವಾ ನಂತರ ಮದುವೆಯಾದರೋ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಸಲ್ಲಿಸಲು ನನ್ನ ತಾಯಿಗೂ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಕೂಡ ದಾವಾಸ್ತಿಗಳನ್ನು ಹೊಡೆದುಕೊಳ್ಳುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

**(ಐಶ್ವರ್ಯ ಚಿದಾನಂದ ಪಟ್ಟಣಶೆಟ್ಟಿ)**
ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ